ಹರಿಕಥಾಮೃತಸಾರಗುರುಗಳ ।
ಕರುಣದಿಂದಾ ಪನಿತುಪೇಳುವೆ ।
ಪರಮಭಗವದ್  ಭಕ್ತರಿದನಾದರದಿಕೇಳುವುದು ॥ ಪ ॥

ಶ್ರೀರಮಣಿ ಕರ ಕಮಲ ಪೂಜಿತ ।
ಚಾರು ಚರಣ ಸರೋಜ ಬ್ರಹ್ಮ ಸ ।
ಮೀರ ವಾಣಿ ಫಣೀಂದ್ರ ವೀಂದ್ರ ಭವೇಂದ್ರ ಮುಖ ವಿನುತ ॥
ನೀರಜ ಭವಾಂಡೋದಯ ಸ್ಥಿತಿ ।
ಕಾರಣನೆ ಕೈವಲ್ಯದಾಯಕ ।
ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವ ॥ ೧ ॥

ಜಗದುದರನತಿ ವಿಮಲಗುಣರೂ ।
ಪಗಳನಾಲೋ ಚನದಿ ಭಾರತ ।
ನಿಗಮತತಿಗಳ ತಿಕ್ರಮಿಸಿ ಕ್ರೀಯಾ ವಿಶೇಷಗಳ ॥
ಬಗೆ ಬಗೆಯನೂತನವ ಕಾಣುತ ।
ಮಿಗೆ ಹರುಷದಿಂ ಪೊಗಳಿ ಹಿಗ್ಗುವ ।
ತ್ರಿಗುಣಮಾನಿ ಮಹಾಲಕುಮಿ ಸಂತೈಸ ಲನುದಿನವು ॥ ೨ ॥

ನಿರುಪಮಾನಂದಾತ್ಮಭವ ನಿ ।
ರ್ಜರ ಸಭಾ ಸಂಸೇವ್ಯ ಋಜು ಗಣ ।
ದರಸೆ ಸತ್ವ ಪ್ರಚುರವಾಣೀ ಮುಖ ಸರೋಜೇನ ॥
ಗರುಡ ಶೇಷ ಶಶಾಂಕ ದಳ ಶೇ ।
ಖರರ ಜನಕ ಜಗದ್ಗುರುವೆ ತ್ವ ।
ಚ್ಚರಣಗಳಿಗಭಿ ವಂದಿಸುವೆ ಪಾಲಿಪುದು ಸನ್ಮತಿಯ ॥ ೩ ॥

ಆರು ಮೂರೆರಡೊಂದುಸಾವಿರ ।
ಮೂರೆರಡು ಶತಶ್ವಾಸ ಜಪಗಳ ।
ಮೂರುವಿಧ ಜೀವರೊಳಗಬ್ಜಜ ಕಲ್ಪ ಪರಿಯಂತ ॥

ತಾ ರಚಿಸಿ ಸಾತ್ವರಿಗೆಸುಖ ಸಂ ।
ಸಾರ ಮಿಶ್ರರಿ ಗಧಮ ಜನರಿಗ ।
ಪಾರ ದುಃಖಗಳೀವ ಗುರು ಪವಮಾನ ಸಲಹೆಮ್ಮ ॥ ೪ ॥

ಚತುರ ವದನನ ರಾಣಿ ಅತಿರೋ ।
ಹಿತವಿಮಲ ವಿಜ್ಞಾನಿ ನಿಗಮ ।
ಪ್ರತತಿ ಗಳಿಗಭಿಮಾನಿ ವೀಣಾ ಪಾಣಿ ಬ್ರಹ್ಮಾಣಿ ॥
ನತಿಸಿ ಬೇಡುವೆ ಜನನಿ ಲಕ್ಷ್ಮೀ ।
ಪತಿಯ ಗುಣಗಳ ತುತಿಪುದಕೆ ಸ ।
ನ್ಮತಿಯ ಪಾಲಿಸಿ ನೆಲೆಸುನೀ ಮದ್ ವದನ ಸದನದಲಿ ॥ ೫ ॥

ಕೃತಿರಮಣಪ್ರದ್ಯುಮ್ನ  ನಂದನೆ ।
ಚತುರವಿಂಶತಿ ತತ್ವಪತಿ ದೇ ।
ವತೆಗಳಿಗೆ ಗುರುವೆನಿಸುತಿಹ ಮಾ   ರುತನ ನಿಜಪತ್ನಿ ॥
ಸತತಹರಿಯಲಿ ಗುರುಗಳಲಿ ಸ ।
ದ್ರತಿಯಪಾಲಿಸಿ ಭಾಗವತ ಭಾ ।
ರತ ಪುರಾಣ ರಹಸ್ಯತತ್ವಗಳರುಪುಕರುಣದಲಿ ॥ ೬ ॥

ವೇದಪೀಠ ವಿರಿಂಚಿ ಭವ ಶ ।
ಕ್ರಾದಿ ಸುರ ವಿಜ್ಞಾನ ದಾಯಕ ।
ಮೋದ ಚಿನ್ಮಯ ಗಾತ್ರಲೋಕ ಪ ವಿತ್ರಸುಚರಿತ್ರ ॥
ಛೇದ ಭೇದ ವಿಷಾದ ಕುಟಿಲಾಂ ।
ತಾದಿ ಮಧ್ಯ ವಿದೂರ ಆದಾ ।
ನಾದಿ ಕಾರಣ ಬಾದರಾಯಣ ಪಾಹಿ ಸತ್ರಾಣ ॥ ೭ ॥

ಕ್ಷಿತಿಯೊಳಗೆ ಮಣಿ ಮಂತ ಮೊದಲಾ ।
ದತಿ ದುರಾತ್ಮರು ಒಂದಧಿಕ ವಿಂ ।
ಶತಿ ಕುಭಾಷ್ಯವ ರಚಿಸೆನಡುಮನೆಯೆಂಬ ಬ್ರಾಹ್ಮಣನ ॥

ಸತಿಯ ಜಠರದೊಳವತರಿಸಿ ಭಾ ।
ರತಿ ರಮಣ ಮಧ್ವಾಭಿಧಾನದಿ ।
ಚತುರದಶ ಲೋ ಕದಲಿಮೆರೆದ ಪ್ರತಿಮ ಗೊಂದಿಸುವೆ ॥ ೮ ॥

ಪಂಚ ಭೇದಾತ್ಮಕ ಪ್ರಪಂಚಕೆ ।
ಪಂಚ ರೂಪಾತ್ಮಕನೆ ದೈವಕ ।
ಪಂಚ ಮುಖ ಶಕ್ರಾದಿಗಳು ಕಿಂ ಕರರುಶ್ರೀಹರಿಗೆ ॥
ಪಂಚ ವಿಂಶತಿ ತತ್ವ ತರತಮ ।
ಪಂಚಿಕೆಗಳನು ಪೇಳ್ದ ಭಾವಿ ವಿ।
ರಿಂಚಿ ಯೆನಿಪಾನಂದತೀರ್ಥರ    ನೆನೆವೆ ನನುದಿನವು ॥ ೯ ॥

ವಾಮದೇವ ವಿರಿಂಚಿತನಯ ಉ ।
ಮಾ ಮನೋಹರ ಉಗ್ರ ಧೂರ್ಜಟಿ ॥
ಸಾಮಜಾಜಿನ ವಸನ ಭೂಷಣ ಸುಮನಸೋತ್ತಂಸ ॥
ಕಾಮಹರ ಕೈಲಾಸ ಮಂದಿರ ।
ಸೋಮಸೂರ್ಯಾನಲ ವಿಲೋಚನ ।
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವ ॥ ೧೦ ॥

ಕೃತ್ತಿವಾಸನೆ ಹಿಂದೆ ನೀ ನಾ ।
ಲ್ವತ್ತು ಕಲ್ಪ ಸಮೀರನಲಿ ಶಿ ।
ಷ್ಯತ್ವ ವಹಿಸಖಿ ಳಾಗಮಾರ್ಥಗ ಳೋದಿಜಲಧಿಯೊಳು ॥
ಹತ್ತು ಕಲ್ಪದಿ ತಪವ ಗೈದಾ ।
ದಿತ್ಯರೊಳಗುತ್ತಮನೆನಿಸಿ ಪುರು ।
ಷೋತ್ತಮನ ಪರಿಯಂಕಪದವೈ ದಿದೆಯೊಮಹದೇವ ॥೧೧॥

ಪಾಕಶಾಸನ ಮುಖ್ಯ ಸಕಲದಿ ।
ವೌಕಸರಿಗಭಿನಮಿಪೆ ಋಷಿಗಳಿ ।
ಗೇಕಚಿತ್ತದಿ ಪಿತೃಗಳಿಗೆ ಗಂಧರ್ವಕ್ಷಿತಿಪರಿಗೆ ॥

ಆ ಕಮಲನಾಭಾದಿ ಯತಿಗಳ ।
ನೀಕಕಾನಮಿ ಸುವೆನು ಬಿಡದೆ ರ ।
ಮಾಕಳತ್ರನ ದಾಸವರ್ಗಕೆ    ನಮಿಪೆ ನನವರತ ॥ ೧೨ ॥

ಪರಿಮಳವು ಸುಮನದೊಳಗನಲನು ।
ಅರಣಿಯೊಳಗಿ ಪ್ಪಂತೆ ದಾಮೋ ।
ದರನು ಬ್ರಹ್ಮಾದಿಗಳ ಮನದಲಿ    ತೋರಿ ತೋರದಲೆ ॥
ಇರುತಿಹ ಜಗನ್ನಾಥ ವಿಠಲನ ।
ಕರುಣ ಪಡೆವ ಮುಮುಕ್ಷು ಜೀವರು ।
ಪರಮಭಾಗವ ತರನುಕೊಂಡಾಡುವುದು ಪ್ರತಿದಿನವು ॥ ೧೩ ॥